ಸಾಕ್ಷಿಯನ್ನು ದಿಃ 14.06.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಹಿ ಸ ಸ ಅ ರವರಿಂದ ಃ-

3. ದಿಃ11-02-2015 ರಂದು ನನ್ನ ಮತ್ತು 1, 3 ಮತ್ತು 4 ನೇ ಆರೋಪಿಗಳ ನಡುವೆ ಆದಂತಹ ಒಪ್ಪಂದ ಪತ್ರ ಮತ್ತು ಘೋಷಣಾತ್ಮಕ ಪತ್ರವನ್ನು ಬರವಣಿಗೆ ರೂಪದಲ್ಲಿ ಮಾಡಿಕೊಟ್ಟಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಮೂಲ ದಾಖಲೆಗಳು ನನ್ನ ಮತ್ತು 1 ರಿಂದ 4 ನೇ ಆರೋಪಿತರ ನಡುವೆ ನಡೆಯುತ್ತಿರುವ ಸಿವಿಲ್ ವ್ಯಾಜ್ಯ ಅಸಲು ದಾವಾ ಸಂಖ್ಯೆ 2812/2016 ರಲ್ಲಿ ಸಲ್ಲಿಸಿರುವುದರಿಂದ ಧೃಡೀಕೃತ ನಕಲುಗಳನ್ನು ನಾನು ಅರ್ಜಿಯನ್ನು ಸಲ್ಲಿಸಿ ನ್ಯಾಯಾಲಯಕ್ಕೆ ನೀಡಿರುತ್ತೇನೆ.

ಟಿಪ್ಪಣಿಃ (ಅಭಿಯೋಜನಾ ಪಕ್ಷದ ಪರವಾಗಿ ಪ್ರಾಜ್ಞಾ ಹಿ.ಸ.ಸ.ಅ ರವರು ಒಪ್ಪಂದ ಪತ್ರ ಮತ್ತು ಘೋಷಣಾತ್ಮಕ ಪತ್ರಗಳ ಧೃಡೀಕೃತ ನಕಲುಗಳನ್ನು ಗುರುತಿಸಲು ನಿಶಾನೆಗೊಳಿಸಲು ಪ್ರತಿ ರಕ್ಷಣಾ ವಕೀಲರು ಎಮ್ ಎ ಪಿ ರವರು ಸಿವಿಲ್ ದಾವೆಯು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದು ಮೂಲ ಪ್ರತಿಗಳು ಆ ದಾವೆಯಲ್ಲಿ ಇರುವ ಕಾರಣ ಧೃಡೀಕೃತ ನಕಲನ್ನು ಹಾಜರುಪಡಿಸಲು ಬರುವುದಿಲ್ಲ ಎಂದು ಭಿನ್ನವಿಸಿಕೊಂಡಿರುತ್ತಾರೆ. ಪರ್ಯಾಯವಾಗಿ ಅಭಿಯೋಜನಾ ಪಕ್ಷದ ಪರವಾಗಿ ಪ್ರಾಜ್ಞಾ ಹಿ.ಸ.ಸ.ಅ ರವರು ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಪೂರ್ವ ಪೀಠಾಸಿನಾಧಿಕಾರಿಗಳು ಪುರಸ್ಕರಿಸಿದ್ದು ಧೃಡೀಕೃತ ನಕಲನ್ನು ನಿಶಾನೆಗೊಳಿಸಲು ಅನುವು ಮಾಡಿಕೊಡಬೇಕೆಂದು ನ್ಯಾಯಾಲಯವನ್ನು ಭಿನ್ನವಿಸಿಕೊಂಡಿರುತ್ತಾರೆ. ಉಭಯೇತರರ ಸುನಾವಣೆ ಯನ್ನು ಆಲಿಸಿದ ಬಳಿಕ ಪ್ರಾಜ್ಞಾ ಪ್ರತಿ ರಕ್ಷಣ ವಕೀಲರ ಮನವಿಯನ್ನು

ಗಮನದಲ್ಲಿಟ್ಟುಕೊಂಡು ದಾಖಲೆಗಳ ಅಸ್ಥಿತ್ವವನ್ನು ಸಾಬೀತು ಪಡಿಸುವ ಬದ್ದತೆಯ ಆಧಾರದ ಮೇಲೆ ನಿಶಾನೆಗೊಳಿಸಲು ಅನುವು ಮಾಡಿಕೊಡಲಾಯಿತು.)

4. ಸದರಿ ಒಪ್ಪಂದ ಪತ್ರ ಮತ್ತು ಘೋಷಣಾತ್ಮಕ ಪತ್ರದ ಧೃಡೀಕೃತ ನಕಲುಗಳನ್ನು ನಿಪಿ 3 ಮತ್ತು ನಿಪಿ 4 ಎಂದು ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾಯಿತು.

5. ಸದರಿ ನಿಪಿ 3 ಒಪ್ಪಂದದ ಪತ್ರದ ಕಂಡಿಕೆಗಳ ಅನುಸಾರವಾಗಿ 1 ನೇ ಆರೋಪಿ ಗೀತಾ ರವರು ನಮಗೆ ಮಾರಾಟ ಮಾಡಲು ಒಪ್ಪಿ ಕೊಂಡಂತಹ ಸ್ವತ್ತು ಅವರ ಸ್ವಯಾರ್ಜಿತ ಸ್ವತ್ತಾಗಿದ್ದು ಸದರಿ ಸ್ವತ್ತಿನಲ್ಲಿ ನನ್ನ ಮಗಳಿಗಾಗಲೀ ಅಥವಾ ಗಂಡನಿಗಾಗಲೀ ಯಾವುದೇ ಅಧಿಕಾರ ಇರುವುದಿಲ್ಲ ಎಂದು ಅದೇ ರೀತಿಯಾಗಿ ಅವರ ಮಗಳಿಗೆ ಮದುವೆಯಾದ ನಂತರ ಆಕೆಯ ಗಂಡನಿಗಾಗಲೀ ಹಾಗೂ ವಿವಾಹದಿಂದ ಜನಿಸಿದ ಮಗುವಿಗೂ ಸಹ ಅಧಿಕಾರ ಇರುವುದಿಲ್ಲ ಎಂದು ನಮೂದಿಸಿಲಾಗಿರುತ್ತದೆ.

6. ಸದರಿ ಸ್ವತ್ತನ್ನು ಕಾಚರಕನಹಳ್ಳಿ ಯಲ್ಲಿರುವ ಸುಬ್ರಮಣ್ಯ ಕೋ ಆಪರೇಟೀವ್ ಬ್ಯಾಂಕ್ ನಲ್ಲಿ ಅಡಮಾನವಾಗಿ ಇಟ್ಟು ರೂ. 19,50,000/- ಗಳ ಹಣವನ್ನು ಸಾಲವಾಗಿ ಪಡೆದಿರುವುದಾಗಿ, ತಾನು ತನ್ನ ಗಂಡನಿಂದ ಪ್ರತ್ಯೇಕವಾಗಿ ಕಳೆದ 20 ವರ್ಷಗಳಿಂದ ವಾಸವಾಗಿರುವುದಾಗಿ ನುಡಿದಿರುತ್ತಾರೆ.

7. ದಿಃ 06-07-2016 ರಂದು ಕ್ರಯದ ಪ್ರಕ್ರಿಯೆಯನ್ನು ಕ್ರಮಬದ್ದ ಮಾಡಿಕೊಳ್ಳುವ ಸಂಬಂಧ ಸಕ್ಷಮ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಸದರಿ ಸ್ವತ್ತಿನ ಕ್ರಯದ ಕರಾರಿನ ಮೇಲಿನ ಛಾಪಾ ಶುಲ್ಕವನ್ನು ಪಾವತಿಸಿರುತ್ತೇವೆ. ಸದರಿ ಕ್ರಯದ ಕರಾರು ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕ್ರಯದ ಕರಾರು ಪತ್ರದ

ಧೃಡೀಕೃತ ನಕಲನ್ನು ನಿಪಿ 5 ಎಂದು ಅಭಿಯೋಜನಾ ಪಕ್ಷದ ಪರವಾಗಿ ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಾಜ್ಞಾ ಹಿ.ಸ.ಸ.ಅ ರವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ